ಭಾರತೀಯ ಜನತಾ ಪಾರ್ಟಿ

ಕೇಂದ್ರೀಯ ಕಚೇರಿ

೧೧, ಅಶೋಕ ರಸ್ತೆ, ಹೊಸ ದೆಹಲಿ-೧೧೦೦೦೧

ದೂ.ಸಂ. :೨೩೦೦೫೭೦೦; ಫ್ಯಾಕ್ಸ್:೨೩೦೦೫೭೮೭

ದಿನಾಂಕ: ಫೆಬ್ರುವರಿ ೨೭,೨೦೧೩

**ಅಗಸ್ತಾವೆಸ್ಟ್ ಲ್ಯಾಂಡ್ ನಿಂದ 12 ವಿವಿಐಪಿ ಹೆಲಿಕಾಪ್ಟರ್ ಗಳ ಖರೀದಿ ಕುರಿತು ರಾಜ್ಯಸಭೆಯಲ್ಲಿ ಅಲ್ಪಾವಧಿ ಚರ್ಚೆ ಆರಂಭಿಸಿದ ವೇಳೆ ಬಿಜೆಪಿ ಎಮ್ ಪಿ ಶ್ರೀ ಪ್ರಕಾಶ್ ಜಾವ್ಡೇಕರ್ ಪ್ರಸ್ತಾಪಿಸಿದ ಮಹತ್ವದ ಅಂಶಗಳು**

* ಈ ಹಗರಣ, ಇಟಲಿಯ ಅಗಸ್ತಾವೆಸ್ಟ್ ಲ್ಯಾಂಡ್ ಕಂಪೆನಿಯಿಂದ ೩೫೪೬ ಕೋಟಿ ಮೌಲ್ಯದ ೧೨ ವಿವಿಐಪಿ ಕಾಪ್ಟರ್ ಗಳ ಖರೀದಿಯಲ್ಲಿ ೪೦೦ರಿಂದ ೬೦೦ ಕೋಟಿ ರೂಪಾಯಿವರೆಗೆ ಕಮೀಷನ್/ಲಂಚ ಪಾವತಿಗೆ ಸಂಬಂಧಿಸಿದ್ದು. ೨೦೧೦ರ ಫೆಬ್ರುವರಿಯಲ್ಲಿ ಈ ವ್ಯವಹಾರ ನಡೆದಿದೆ.

* ಫಿನ್ ಮೆಕಾನಿಕಾದ ಉದ್ಯೋಗಿಯಾದ ಬೋರ್ಗೋಗಿನಿ ಎಂಬ ಹೆಸರಿನ ಮಾಹಿತಿದಾರನೊಬ್ಬನಿಂದಾಗಿ ಈ ಹಗರಣ ಬಯಲಾಗಿದೆ. ಈ ಹಗರಣವನ್ನು ಹೊರಗೆಡವಿದ ಈತ ಇಟಲಿಯ ತನಿಖಾ ಸಂಸ್ಥೆಗಳಿಗೆ ೫೬೪ ಪುಟಗಳ ಹೇಳಿಕೆಯನ್ನು ನೀಡಿದ್ದಾನೆ.

* ಆ ಬಳಿಕ ಇಟಲಿಯ ಸಂಸ್ಥೆಗಳು ಇಂಟರ್ ಸೆಪ್ಟ್ಸ್, ಟೇಪಿಂಗ್ ಟ್ರ್ಯಾಕಿಂಗ್ ಮತ್ತು ಟ್ರೇಸಿಂಗ್ ಹಾಗು ಅಗಾಧ ಪ್ರಮಾಣದ ಸಾಕ್ಷ್ಯ ಪುರಾವೆಗಳನ್ನು ಕಂಡುಕೊಳ್ಳುವ ವಿಧಾನಗಳಿಂದ ಮತ್ತಷ್ಟು ತನಿಖೆಯನ್ನು ಆರಂಭಿಸಿದವು.

* ಮಧ್ಯವರ್ತಿ ಜೋಡಿಯಾದ ಹಷ್ಕೆ ಮತ್ತು ಗೆರೋಸ ಸುಮಾರು ೧೦೦-೧೨೫ ಕೋಟಿ ಪಡೆದಿದ್ದಾರೆ ಎಂದು ಆರೋಪಿಸಲಾಗಿದ್ದು, ಮತ್ತೊಬ್ಬ ಮಧ್ಯವರ್ತಿ ಕ್ರಿಶ್ಚಿಯನ್ ಮೈಕೇಲ್ ೨೪೦ ಕೋಟಿ ಪಡೆದಿದ್ದು ಅದರಲ್ಲಿ ೪೦ ಕೋಟಿಯನ್ನು ತಾನಿಟ್ಟುಕೊಂಡು ಉಳಿದ ೨೦೦ ಕೋಟಿಯನ್ನು ಅಗಸ್ಟವೆಸ್ಟ್ ಲ್ಯಾಂಡ್ ಪರವಾಗಿ ವ್ಯವಹಾರ ಕುದುರಿಸಿದ ವ್ಯಕ್ತಿ/ವ್ಯಕ್ತಿಗಳಿಗೆ ವರ್ಗಾಯಿಸಲಾಗಿದೆ.

* ಕಮೀಷನ್/ಲಂಚದ ಹಣವನ್ನು ಐಡಿಎಸ್ ಟುನೀಸಿಯ, ಐಡಿಎಸ್ ಇಂಡಿಯಾ ಮತ್ತು ಏರೋಮ್ಯಾಟ್ರಿಕ್ಸ್ ಚಂಡೀಗಢ್ ನಂತಹ ಮುಂಚೂಣಿ ಕಂಪೆನಿಗಳ ಮೂಲಕ ಟ್ಯುನೀಸಿಯಾ ಮತ್ತು ಮಾರಿಷಸ್ ಮಾರ್ಗವಾಗಿ ಲಂಡನ್ ನಿಂದ ಭಾರತಕ್ಕೆ ಈ ಹಣ ರವಾನಿಸಲಾಗಿದೆ ಎಂಬ ಆರೋಪವಿದ್ದು, ಈ ಇಡೀ ವ್ಯವಹಾರಕ್ಕೆ ಹಣ ದುರ್ವ್ಯವಹಾರದ ಕೋನವೂ ಇದೆ.

* ಇಟಲಿಯಲ್ಲಿ ಬೋರ್ಗೋಗಿನಿ ನೀಡಿದ ೫೬೪ ಪುಟಗಳ ಹೇಳಿಕೆಯಲ್ಲಿ ಭ್ರಷ್ಟಾಚಾರ ಹೇಗೆ ನಡೆಯಿತು ಎಂಬ ಸಂಪೂರ್ಣ ವಿವರ ಒದಗಿಸಲಾಗಿದೆ.

* ವ್ಯವಹಾರದಲ್ಲಿ ಷಾಮೀಲಾದ ಮಧ್ಯವರ್ತಿಗಳು ಹೇಗೆ ವರ್ತಿಸಿದರು ಮತ್ತು ಹಣ ವ್ಯವಹಾರದ ಸಾಕ್ಷ್ಯವನ್ನು ನಾಶಪಡಿಸಲು ಯತ್ನಿಸಿದರು ಎಂಬ ಅಂಶ, ಪತ್ತೆ ಹಚ್ಚಲಾದ ಧ್ವನಿ ಸುರುಳಿಯಲ್ಲಿ ಇಡೀ ಒಂದು ವರ್ಷ ಬಹಿರಂಗವಾಗಿದ್ದರೂ ಯುಪಿಏ ಸರ್ಕಾರ ಕಾರ್ಯಪ್ರವೃತವಾಗುವಲ್ಲಿ ವಿಫಲವಾಗಿದೆ.

* ಹೆಲಿಕಾಪ್ಟರ್ ವ್ಯವಹಾರ ಕೈಗೂಡಿದ್ದರೆ ಪ್ರಯೋಜನ ಪಡೆಯುತ್ತಿದ್ದ ಆ ದೇಶ (ಇಟಲಿ) ವ್ಯವಹಾರದಲ್ಲಿ ರುಶುವತ್ತು ಪಾವತಿ ಆರೋಪದ ಬಗ್ಗೆ ತನಿಖೆ ಆರಂಭಿಸಿದೆ ಅಲ್ಲದೆ ಮುಖ್ಯ ಆರೋಪಿಯನ್ನೂ ಬಂಧಿಸಿದೆ, ಆದರೆ ನಷ್ಟಕ್ಕೆ ಗುರಿಯಾಗಬಹುದಾಗಿದ್ದ ದೇಶ (ಭಾರತ) ತನಿಖೆಯನ್ನು ಆರಂಭಿಸಲಿಲ್ಲ.

* ಸುಮಾರು ಒಂದು ವರ್ಷದ ಹಿಂದೆಯೇ ಇಟಲಿಯ ಮತ್ತು ಕೆಲ ಭಾರತೀಯ ಪತ್ರಿಕೆಗಳು ಈ ಶಂಕಾಸ್ಪದ ವ್ಯವಹಾರವನ್ನು ಎತ್ತಿಹೇಳಲು ಆರಂಭಿಸಿದವು. ಸುಮಾರು ಒಂದು ವರ್ಷ ಕಾಲ ರುಶುವತ್ತಿನ ವಿಷಯ ಸಾರ್ವಜನಿಕ ವಲಯದಲ್ಲಿತ್ತು. ಇಟಲಿಯ ತನಿಖೆಯ ವೇಳೆ ಭಾರತೀಯರ ಹೆಸರುಗಳು ಸಹ ಕಾಣಿಸಿಕೊಂಡವು. ಭಾರತ ಸರ್ಕಾರ ಏಕೆ ತನಿಖೆಗೆ ಆದೇಶಿಸಲಿಲ್ಲ?

* ಭಾರತೀಯ ನ್ಯಾಯಾಲಯಗಳಲ್ಲಿ ತಾವು ಇದನ್ನು ಹೇಗೆ ನಿಭಾಯಿಸಬಹುದು ಎಂಬ ಬಗ್ಗೆ ಹಾಗು ಇನ್ನಿತರ ವಿಷಯಗಳ ಬಗ್ಗೆ ಸಹ ಆರೋಪಿತರು  ಚರ್ಚಿಸಿದ್ದಾರೆ ಎಂಬುದು, ಪತ್ತೆಹಚ್ಚಲಾದ ಧ್ವನಿ ಸುರುಳಿಯಲ್ಲಿ ನಮೂದಾಗಿದೆ. ಹಾರ್ಡ್ ಡಿಸ್ಕ್ ಮತ್ತಿತರ ಕಡೆಯಿಂದ ಎಲ್ಲ ಸಾಕ್ಷ್ಯಗಳನ್ನು ತಾವು ಹೇಗೆ ನಾಶಪಡಿಸಿದರೆಂಬುದೂ ಇದರಲ್ಲಿದೆ.

* ಪ್ರಮುಖ ಆರೋಪಿಗಳಲ್ಲಿ ಒಬ್ಬನಾದ ಕ್ರಿಶ್ಚಿಯನ್ ಮೈಕೇಲ್ ನ ಕಥೆ ಇನ್ನೂ ಕುತೂಹಲಕಾರಿಯಾದದ್ದು. ಅವನ ತಂದೆ ಕೂಡ ಒಬ್ಬ ರಕ್ಷಣಾ ಸಾಮಗ್ರಿ ವ್ಯವಹಾರಸ್ಥ. ಇಂತಹುದೇ ಪ್ರಕರಣದಲ್ಲಿ, ೧೯೮೬ರಲ್ಲಿ ದಿವಂಗತ ಶ್ರೀ ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ, ಬ್ರಿಟಿಷ್ ಪ್ರಧಾನಮಂತ್ರಿ ಮಾರ್ಗರೆಟ್ ಥ್ಯಾಚರ್ ಭಾರತಕ್ಕೆ ಭೇಟಿ ನೀಡಿದ್ದರು ಹಾಗು ಅಗಸ್ಟ ವೆಸ್ಟ್ ಲ್ಯಾಂಡ್ ನಿಂದ ಎ ಡಬ್ಲ್ಯು ೩೦ ಕಾಪ್ಟರ್ ಗಳನ್ನು ಖರೀದಿಸುವಂತೆ ಅವರ ಮನವೊಲಿಸಿದ್ದರು. ಆಗಿನ ಅವರ  ಸಲಹೆಗಾರರು ಕೆಲ ಆಕ್ಷೇಪಣೆಗಳನ್ನು ಎತ್ತಿದಾಗ್ಯೂ, ಕೊನೆಗೂ ಈ ವ್ಯವಹಾರ ಅದು ಹೇಗೆ ಕುದುರಿತು ಎಂಬುದು ನನಗೆ ಅರ್ಥವಾಗಿಲ್ಲ. ಆಗಿನ ಆ ೬೨-ದಶಲಕ್ಷ ಪೌಂಡ್ ವ್ಯವಹಾರ ಒಂದು ವಿನಾಶಕಾರಿಯಾಗಿ ಪರಿಣಮಿಸಿತು. ಹೆಲಿಕಾಪ್ಟರ್ ಅವಗಢವೊಂದರಲ್ಲಿ ಕಡೇಪಕ್ಷ ೧೯ ಜನ ಬಲಿಯಾದರು ಹಾಗು ಆ ಬಳಿಕ  ಆ ಹೆಲಿಕಾಪ್ಟರ್ ಗಳನ್ನು ಸ್ಥಗಿತಗೊಳಿಸಲಾಯಿತು ನಂತರ ೧೯೯೧ರಲ್ಲಿ ರದ್ದಿಯಾಗಿ ಅದನ್ನು ೯ ದಶಲಕ್ಷ ಪೌಂಡ್ ಗಳಿಗೆ ಮಾರಲಾಯಿತು. ಅದೂ ಕೂಡ ತನ್ನದೇ ರೀತಿಯಲ್ಲಿ ಒಂದು ಹಗರಣವಾಗಿತ್ತು.

* ೧೨ ವಿವಿಐಪಿ ಎಡಬ್ಲ್ಯು೧೦೧ ಕಾಪ್ಟರ್ ಗಳಿಗೆ ಸಂಬಂಧಿಸಿದಂತೆ ೨೦೧೨ರ ಜುಲೈನಲ್ಲಿ ನೇಪಲ್ಸ್ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ, ಆದರೆ ಭಾರತ ಸರ್ಕಾರ ಇನ್ನೂ ತನಿಖೆಗೆ ಆದೇಶಿಸುವ ಬಗ್ಗೆ ಚಿಂತಿಸಿಲ್ಲ. ಈ ಆರೋಪ ಪಟ್ಟಿಯಲ್ಲಿ ಎರಡು ಕಡೆ "ಆ ಕುಟುಂಬ" ಎಂಬ ಪ್ರಸ್ತಾಪವಿದೆ. ಈಗ ಆ ಕುಟುಂಬ ಯಾವುದು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. "ಆ ಕುಟುಂಬ" ಎಂಬ ಪ್ರಸ್ತಾವ "ತ್ಯಾಗಿ ಕುಟುಂಬ" ಕುರಿತದ್ದು ಎಂದು ಕಾಂಗ್ರೆಸ್ ನವರು ಹೇಳಿಕೊಳ್ಳುತ್ತಿದ್ದಾರೆ. ಆದರೆ ಇದು ಸತ್ಯವಲ್ಲ ಏಕೆಂದರೆ ತ್ಯಾಗಿ ಅವರ ಹೆಸರುಗಳು "ತ್ಯಾಗಿ ಕುಟುಂಬ" ಎಂದು ಆರೋಪ ಪಟ್ಟಿಯಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗಿದೆ. ಆದ್ದರಿಂದ ಈ ಮತ್ತೊಂದು "ಆ ಕುಟುಂಬ" ಯಾವುದೆಂದು ತಿಳಿಯಲು ತನಿಖೆ ನಡೆಸಬೇಕಾದ ಅಗತ್ಯವಿದೆ.

* ೨೦೧೨ರ ಡಿಸೆಂಬರ್ ೧೨ರಂದು ಸಂಸತ್ತಿನಲ್ಲಿ ಸರ್ಕಾರ ನನ್ನ ಪ್ರಶ್ನೆಗೆ ಉತ್ತರ ನೀಡಿ ರಕ್ಷಣಾ ಸಚಿವಾಲಯ, ವಿದೇಶಾಂಗ ಸಚಿವಾಲಯದ ಮೂಲಕ ಇಟಲಿಯಿಂದ ಮಾಹಿತಿ ಕೇಳಿದ್ದು, ಅದಕ್ಕಾಗಿ ಎದುರುನೋಡಲಾಗುತ್ತಿದೆ ಎಂದು ಹೇಳಿತ್ತು. ಆದ್ದರಿಂದ ಅಧಿಕೃತ ಮಾಹಿತಿ ಇಲ್ಲದ ಕಾರಣ ಅದು ಯಾವುದೇ ತನಿಖೆಯನ್ನು ಆರಂಭಿಸಲಿಲ್ಲ.

* ೨೦೧೨ರ ಡಿಸೆಂಬರ್ ೧೪ರಂದು ಮತ್ತೊಮ್ಮೆ ನಾನು ರಕ್ಷಣಾ ಸಚಿವರಿಗೆ ಪತ್ರ ಬರೆದು, ಕಳೆದ ಒಂದು ವರ್ಷದಿಂದ ವಿಷಯ ಮಾಧ್ಯಮ ವಲಯದಲ್ಲಿದೆ ಹಾಗು ಇಟಲಿ ಸರ್ಕಾರದ ತನಿಖೆ, ವಿಷಯದ ಬಗ್ಗೆ ಬಹಳಷ್ಟನ್ನು ಬಹಿರಂಗ ಗೊಳಿಸಿರುವುದರಿಂದ ತನಿಖೆಗೆ ಆದೇಶಿಸುವಂತೆ ಕೇಳಿದ್ದೆ. "ರಾಜಕೀಯ ಇಚ್ಚಾಶಕ್ತಿ ಇದ್ದರೆ ಸದಾ ಒಂದು ಮಾರ್ಗವೂ ಇರುತ್ತದೆ" ಎಂದೂ ನನ್ನ ಪತ್ರದಲ್ಲಿ ಬರೆದಿದ್ದೆ.

* ಫಿನ್ ಮೆಕಾನಿಕಾದ ಸಿಇಓ ಬಂಧನವಾದಾಗ, ಸರ್ಕಾರ ತಾನು ಆಂತರಿಕ ತನಿಖೆ ನಡೆಸಿದ್ದು, ಯಾವುದೇ ಅವ್ಯವಹಾರ ನಡೆದಿಲ್ಲ ಎಂಬುದು ಕಂಡುಬಂದಿದೆ ಎಂದು, ಮಾಧ್ಯಮದ ಒಂದು ವರ್ಗದಲ್ಲಿ ಹುಸಿಕಥೆಯನ್ನು ಹುಟ್ಟಿಹಾಕಿತು. ರಕ್ಷಣಾ ಸಚಿವರು ಈಗ ನನ್ನ ಎರಡು ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ: ಮೊದಲನೆಯದಾಗಿ, ನಾನು ಪ್ರಶ್ನೆ ಕೇಳಿದಾಗ ಸಚಿವರು ಸಂಸತ್ತಿಗೆ ಈ ಮಾಹಿತಿಯನ್ನು ಏಕೆ ನೀಡಲಿಲ್ಲ? ಸರ್ಕಾರ ನಿಜವಾಗಿಯೂ ಆಂತರಿಕ ತನಿಖೆ ನಡೆಸಿದ್ದೇ ಆಗಿದ್ದಲ್ಲಿ ನನ್ನ ಪ್ರಶ್ನೆಗೆ ಸೂಕ್ತ ಉತ್ತರ ನೀಡದೇ ಇರುವುದು ಹಕ್ಕುಚ್ಯುತಿಯಾಗುತ್ತದೆ. ಎರಡನೆಯದಾಗಿ, ಒಂದುವೇಳೆ ಆಂತರಿಕ ತನಿಖೆ ನಡೆದಿರುವುದೇ ಆದಲ್ಲಿ, ಅದು ಯಾವ ರೀತಿಯ ತನಿಖೆಯಾಗಿತ್ತು? ಅದನ್ನು ಯಾರು ನಡೆಸಿದರು? ಅದರ ಫಲಿತಾಂಶವೇನು?

* ಮೊದಲನೆಯದಾಗಿ, ಯಾವುದೇ ಮೂಲದ ಆಧಾರದ ಮೇಲೆ,ಯಾವುದೇ ಮಹತ್ವದ ವಿಷಯದ ಬಗ್ಗೆ ಸಿಬಿಐ ತನಿಖೆ ಆರಂಭಿಸಬಹುದು. ತನಿಖೆ ಆರಂಭಿಸಲು ಯಾವುದೇ ಅಧಿಕೃತ ಮಾಹಿತಿಗಾಗಿ ಅದು ಕಾಯಬೇಕಾಗಿಲ್ಲ. ಮೊದಲಿಗೆ ತನಿಖೆಗೆ ಏಕೆ ಆದೇಶಿಸಲಿಲ್ಲ ಎಂಬುದಕ್ಕೆ ಸರ್ಕಾರ ಉತ್ತರಿಸಬೇಕಾಗಿದೆ.

* ಶ್ರೀ ಆಂಟೋನಿಯವರ ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನಿಸಲಾಗದು ಎಂದು ಕಾಂಗ್ರೆಸ್ ನವರು ಹೇಳುತ್ತಾರೆ.....ಇದು ಆ ವ್ಯಕ್ತಿಯ ಪ್ರಾಮಾಣಿಕತೆಯ ಪ್ರಶ್ನೆಯಲ್ಲ. ಒಂದು ಅತ್ಯಂತ ಭ್ರಷ್ಟ ವ್ಯವಹಾರ  ಅವರ ಸಮ್ಮುಖದಲ್ಲಿ ನಡೆದಿದ್ದಲ್ಲಿ, ಅದಕ್ಕೆ ಅವರು ಉತ್ತರಿಸಬೇಕಾಗುತ್ತದೆ.

* ಫಿನ್ ಮೆಕಾನಿಕಾದ ಭಾರತೀಯ ಕಾರ್ಯಾಚರಣೆಗಳ ಮುಖ್ಯಸ್ಥ ಗಿರಾಸೋಲ್ ಅವರ ಹೆಸರು ಬೆಳಕಿಗೆ ಬರುತ್ತಿದ್ದಂತೆಯೇ,ಬೋಫೋರ್ಸ್ ಹಗರಣ ಪ್ರಕರಣದ ಪ್ರಮುಖ ಆರೋಪಿ ಒಟ್ಟಾವಿಯೊ ಖ್ವಟ್ರೋಚಿ ಮಾಡಿದಂತೆ.ಇವರೂ ಭಾರತದಿಂದ ಪಲಾಯನ ಮಾಡಿದ್ದಾರೆ.

* ಕಾಗ್ರೆಸ್ ನ ಒಬ್ಬ ನಾಯಕರು ನನ್ನನ್ನು ಭೇಟಿ ಮಾಡಿ, ಈ ವ್ಯವಹಾರದಲ್ಲಿ ರಾಜಕೀಯ ಕೋನ ಇಲ್ಲ ಪ್ರಕಾಶ್ ಎಂದು ಹೇಳಿದರು...ನಾನು ಹೇಳಿದೆ ಇದು ಅದಕ್ಕಿಂತಲೂ ಹೆಚ್ಚು ಘೋರವಾದದ್ದು ಏಕೆಂದರೆ ತನ್ನ ಮೂಗಿನ ಅಡಿಯಲ್ಲೆ ಅಧಿಕಾರಶಾಹಿ ಲಂಚ ಪಡೆದಿದ್ದರೂ, ಸರ್ಕಾರಕ್ಕೆ ಆ ಬಗ್ಗೆ ಯಾವುದೇ ಸುಳಿವು ಇರಲಿಲ್ಲ ಎಂಬ ಅರ್ಥವಾಗುತ್ತದೆ.

* ಕಾಂಗ್ರೆಸ್ ಯಾವಾಗಲೂ ಒಂದು ಮಾದರಿಯಲ್ಲೇ ವರ್ತಿಸುತ್ತದೆ. ಮೊದಲಿಗೆ ಅದು, ಅಂತಹ ಹಗರಣ ನಡೆದಿರುವುದನ್ನೇ ಸಂಪೂರ್ಣವಾಗಿ ನಿರಾಕರಿಸುತ್ತದೆ: ಆ ಬಳಿಕ ವಿಳಂಬಗೊಳಿಸಲು ಯತ್ನಿಸುತ್ತದೆ: ಮತ್ತು ಅದು

ಪಾರಾಗಲಾರದಂತಹ ಒತ್ತಡಕ್ಕೆ ಸಿಕ್ಕಾಗ ಅದಕ್ಕೆ ಬೇರೆಯವರನ್ನು ದೂಷಿಸಲು ಯತ್ನಿಸುತ್ತದೆ-೨ಜಿ ಹಗರಣದಲ್ಲಿಯಾದಂತೆ ತನ್ನ ಮಿತ್ರ ಪಕ್ಷಗಳನ್ನು.

* ಹಗರಣವಿಲ್ಲದ ಒಂದೇಒಂದು ಕ್ಷೇತ್ರವನ್ನೂ ಕಾಗ್ರೆಸ್ ಉಳಿಸಿಲ್ಲ- ಗಗನದಲ್ಲಿ ಆಂಟ್ರಿಕ್ಸ್-ಡೇವಾಸ್ ಮತ್ತು ಈ ಹೆಲಿಕಾಪ್ಟರ್ ಹಗರಣ, ಭೂಮಿ ಮೇಲೆ ಹಲವಾರು ರಕ್ಷಣಾ ಭೂ ಹಗರಣಗಳು, ಭೂಮಿಯಡಿ ಇಂಧನದ ಕಲ್ಲಿದ್ದಲು ಹಗರಣ, ವಾಯುವಿನಲ್ಲಿ ೨ಜಿ ತರಂಗಗುಚ್ಚ ಹಗರಣ ಹಾಗು ನೀರಿಗೆ ಸಂಬಂಧಿಸಿದಂತೆ ಕಡಲತಡಿ ಗಣಿಗಾರಿಕೆ ಮತ್ತು ಗಂಗಾ ಮತ್ತು ಯಮುನಾ ಕಾರ್ಯಯೋಜನೆ ಹಗರಣಗಳು.

* ಸರ್ವೋಚ್ಚ ನ್ಯಾಯಾಲಯದ ನಿಗಾದಲ್ಲಿ ಸಿಬಿಐ ತನಿಖೆ, ತನಿಖಾ ಪತ್ರ ಕಳುಹಿಸುವುದು, ಹಣವ್ಯವಹಾರವನ್ನು ಗುರುತಿಸುವುದು, ಆರೋಪಿಯನ್ನು ಭಾರತಕ್ಕೆ ಕಳುಹಿಸುವುದು, ಫಿನ್ ಮೆಕಾನಿಕಾ/ಅಗಸ್ಟವೆಸ್ಟ್ ಲ್ಯಾಂಡ್ ಪರ ವ್ಯವಹಾರ ಕುದುರಿಸಿ ಭಾರತದಲ್ಲಿ ಲಂಚ ಪಡೆದ ವ್ಯಕ್ತಿಯನ್ನು ಗುರುತಿಸಿ ಪ್ರಕರಣ ದಾಖಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

*********